(ಇಂದು ದಿನಾಂಕ: **09.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಎಂ ರವರಿಂದ:

1ನೇ ಪ್ರತಿವಾದಿ ಆಸ್ತಿಯನ್ನು ಮಾರಾಟ ಮಾಡಲು ಸರ್ಕಾರದಿಂದ ಅನುಮತಿ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಅನುಮತಿ ಬೇಕು ಎಂದು ಕೇಳಿದ್ದರು. ತಕರಾರಿನಲ್ಲಿ ಸರ್ಕಾರದಿಂದ ಅನುಮತಿ ಪಡೆದು ಖರೀದಿಸಿರುತ್ತೇವೆಂದು ಹೇಳಿರುತ್ತೇನೆ. ನಾನು ತಕರಾರು ಸಲ್ಲಿಸುವ ಕಾಲಕ್ಕೆ 1ನೇ ಪ್ರತಿವಾದಿ ಬದುಕಿದ್ದರು. ಅರ್ಜಿ ಸಲ್ಲಿಸಿದರೆ ಸರ್ಕಾರದಿಂದ ಪಡೆದ ಅನುಮತಿ ಪತ್ರ ಸಿಗುತ್ತದೆ. ಸದರಿ ಅನುಮತಿ ಪತ್ರವನ್ನು ಪಡೆದು ಅರ್ಜಿ ಸಲ್ಲಿಸಿ ಪಡೆದುಕೊಂಡು ಹಾಜರುಪಡಿಸಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಮೂಲ ದಾಖಲೆ ನನ್ನ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಕುಳುವಾಡಿಕೆ ಜಮೀನಾಗಿರುವ ಕಾರಣ 1ನೇ ಪ್ರತಿವಾದಿಗೆ ಮಾರಾಟ ಮಾಡಲು ಹಕ್ಕು ಇಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ವಿದ್ಯಾವಂತರಲ್ಲ ಎಂದರೆ ಸಾಕ್ಷಿ 7ನೇ ತರಗತಿವರೆಗೆ ಓದಿರುವುದಾಗಿ ಹೇಳಿದ್ದರು. 1ನೇ ಪ್ರತಿವಾದಿಗೆ ಹೆಂಡತಿ ಮತ್ತು ಮಕ್ಕಳು ಇರುವುದಿಲ್ಲ. 1ನೇ ಪ್ರತಿವಾದಿ ತನ್ನ ತಂದೆಯ ಮರಣಾ ನಂತರ ದಾವಾ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದರು. ದಾವಾ ಆಸ್ತಿಯಲ್ಲಿ ಅರ್ಧ ಭಾಗದಂತೆ 1ನೇ ಪ್ರತಿವಾದಿ ಮತ್ತು ಹೊನ್ನಯ್ಯರ ತಂದೆ ಉಗ್ಗಯ್ಯ ಮಾಡಿಕೊಂಡಿದ್ದರು. ಸದರಿ ಜಮೀನನ್ನು ವಾದಿ ಉಳುಮೆ ಮಾಡುತ್ತಿದ್ದರು. ಸರ್ವೆ ನಂಬರ್ 55 ಕುಳುವಾಡಿಕೆ ಜಮೀನಾಗಿದ್ದು ಸೇವೆ ಮಾಡಿದ್ದಕ್ಕಾಗಿ ಸದರಿ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯು ಗಂಡು ಸಂತಾನ ಇಲ್ಲದ ಕಾರಣ, ವಾದಿಗೆ ಕೊಡುವ ಇಚ್ಛೆಯನ್ನು ಹೊಂದಿದ್ದರು ಎಂದರೆ ಸರಿಯಲ್ಲ.

ದಿ: 15.10.2008 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕರಾರು ಪತ್ರವನ್ನು 1,10,000/- ರೂಗಳಿಗೆ ವಾದಿಯ ಹೆಸರಿಗೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಅದೇ ದಿನ 1ನೇ ಪ್ರತಿವಾದಿ ವಾದಿಯಿಂದ 75,000/- ರೂಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಉಳಿದ

35,000/- ರೂ ಹಣವನ್ನು ದಿಃ 30.03.2009 ರೊಳಗೆ ಪಡೆದುಕೊಂಡು ಕ್ರಯ ಪತ್ರ ಮಾಡಿಕೊಳ್ಳುವುದಾಗಿ 1ನೇ ಪ್ರತಿವಾದಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ವಾದಿ 1ನೇ ಪ್ರತಿವಾದಿಯನ್ನು ಉಳಿದ ಹಣ ಪಡೆದುಕೊಂಡು ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ನಾನು ಮತ್ತು 1ನೇ ಪ್ರತಿವಾದಿ ಸೇರಿಕೊಂಡು ವಾದಿಗೆ ಮೋಸ ಮಾಡುವ ಉದ್ದೇಶದಿಂದ ದಿಃ 22.09.2010 ರಂದು ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು 4,90,000/- ರೂಗಳಿಗೆ ಖರೀದಿಸಿರುತ್ತೇನೆ. ಸದರಿ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ಜಮೀನಿನಿಂದ ಸದರಿ ಹಣ ಬಂದಿರುತ್ತದೆ. ಹಣವನ್ನು 1ನೇ ಪ್ರತಿವಾದಿಗೆ ಕೊಟ್ಟ ಬಗ್ಗೆ ಜಿ.ಕೆ ಕುಮಾರ್ ರವರು ಸಾಕ್ಷಿದಾರರಾಗಿರುತ್ತಾರೆ. ದಿಃ 22.09.2010 ರಂದು ಆದ ಕ್ರಯ ಪತ್ರ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸೃಷ್ಟಿಸಿಕೊಂಡ ಕ್ರಯಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ 1ನೇ ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಉಗ್ಗೇಗೌಡ ಮತ್ತು ಹೊನ್ನಯ್ಯ ಖಾತೆ ಮಾಡಲು ತಕರಾರು ಸಲ್ಲಿಸಿದ್ದರು. ಸದರಿ ತಕರಾರನ್ನು ಪರಿಶೀಲನೆ ಮಾಡಿ ಖಾತೆ ಮಾಡಿರುತ್ತಾರೆ.

ದಾವೆ ದಾಖಲಿಸುವ ಮೊದಲು ವಾದಿ ನನಗೆ ನೋಟೀಸ್ ಕಳುಹಿಸಿದ್ದರು. ಸದರಿ ನೋಟೀಸಿಗೆ ಉತ್ತರ ಕೊಡಲು ತೊಂದರೆ ಇರಲಿಲ್ಲ. ದಿಃ 15.10.2008 ರಂದು 1ನೇ ಪ್ರತಿವಾದಿ ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡುವುದಾಗಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ 1ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನವನ್ನು ವಾದಿಗೆ ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಕರಾರು ಪತ್ರದಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಅಂದಿನಿಂದ ವಾದಿ ದಾವಾ ಆಸ್ತಿಯಲ್ಲಿ ಕಾಫಿ ಮತ್ತು ಸಿಲ್ವರ್ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಅಂದಿನಿಂದ ವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ದಿಃ 15.10.2008 ರಂದು 1ನೇ ಪ್ರತಿವಾದಿ ವಾದಿಗೆ ಕರಾರು ಪತ್ರ ಮಾಡಿಕೊಟ್ಟಿರುವ ಕಾರಣ, ವಾದಿಯ ಹೆಸರಿಗೆ ಕ್ರಯ ಪತ್ರ ಮಾಡಿಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ವಾದಿ ಉಳಿದ 35,000/- ಹಣವನ್ನು ಕೊಟ್ಟು ಕ್ರಯ ಪತ್ರವನ್ನು ಮಾಡಿಕೊಳ್ಳಲು ಯಾವಾಗಲೂ ಸಿದ್ಧನಿದ್ದರೂ ಸಹ 1ನೇ ಪ್ರತಿವಾದಿ

ಮೋಸಮಾಡುವ ಉದ್ದೇಶದಿಂದ ನನಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರ ಮಾಡಿಸಿಕೊಳ್ಳಲು ನಾನು 1ನೇ ಪ್ರತಿವಾದಿಯೊಂದಿಗೆ ಶರೀಕ್ ಆಗಿದ್ದೆ ಎಂದರೆ ಸರಿಯಲ್ಲ.

ದಿಃ 22.09.2010 ರಂದು ಕ್ರಯ ಪತ್ರ ಆದರೂ ಸಹ 1ನೇ ಪ್ರತಿವಾದಿ ಸ್ವಾಧೀನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರ ಆಗಿರುವ ಕಾರಣ, ಖಾತೆ ಆಗಿದ್ದು ಸ್ವಾಧೀನದಲ್ಲಿದ್ದೇನೆಂದು ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ರೆವಿನ್ಯೂ ಅಧಿಕಾರಿಗಳೊಂದಿಗೆ ಶರೀಕರಾಗಿ ಮಾಡಿಕೊಂಡ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾತೆ ಮತ್ತು ಕ್ರಯ ಪತ್ರ ವಾದಿ ಮತ್ತು ಅವರ ಕುಟುಂಬದವರಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕುಳುವಾಡಿಕೆ ಜಮೀನು ಆಗಿರುವ ಕಾರಣ, ಅದು ಅವರ ಕುಟುಂಬಸ್ಥರಿಗೆ ಮಾತ್ರ ಸಲ್ಲಬೇಕಾಗುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಕರಾರು ಪತ್ರ ಮಾಡಿಕೊಟ್ಟಿರುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಕ್ರಯ ಪತ್ರ ಮಾಡಿಕೊಡುವ ಮೊದಲು 1ನೇ ಪ್ರತಿವಾದಿ ಯಾರಿಗೂ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದು ಹೇಳಿದ್ದರು. 1ನೇ ಪ್ರತಿವಾದಿ ಕರಾರು ಪತ್ರ ಮಾಡಿಕೊಟ್ಟಿದ್ದ ವಿಚಾರ ಇಡೀ ಊರಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೂ ಸಹ ತಿಳಿದಿದ್ದರೂ ಸಹ ಮೋಸಮಾಡುವ ಉದ್ದೇಶದಿಂದ ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಕರಾರಿನ ನಿಬಂಧನೆಗಳ ಪ್ರಕಾರ ನಡೆದುಕೊಳ್ಳದೇ ನನಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3–4 ವರ್ಷಗಳ ಹಿಂದೆ 1ನೇ ಪ್ರತಿವಾದಿ ತೀರಿ ಹೋಗಿರುತ್ತಾರೆ. 1ನೇ ಪ್ರತಿವಾದಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆಂದರೆ ಸಾಕ್ಷಿ ಅವರು ವಿವಾಹವಾಗಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಇಲ್ಲದ ಕಾರಣ, ನಾನು ವಾದಿಯ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೂಡಬೇಕಾಗುತ್ತದೆ ಎಂದರೆ ಸರಿಯಲ್ಲ. ವಾದಿ ಕರಾರು ಪತ್ರದ ಪ್ರಕಾರ ನಡೆದುಕೊಳ್ಳಲು ಯಾವಾಗಲೂ ಸಿದ್ಧರಿದ್ದರು ಎಂದರೆ ಸರಿಯಲ್ಲ. ನಾನು ಕ್ರಯ ಪತ್ರ ಮಾಡಿಸಿಕೊಂಡಿರುವ ಕಾರಣ, 1ನೇ ಪ್ರತಿವಾದಿ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಇರುವ ಸಹಿ 1ನೇ ಪ್ರತಿವಾದಿಯದಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿರುವ ಸಹಿಯ ಬಗ್ಗೆ ತಜ್ಞರಿಗೆ ಪರಿಶೀಲನೆಗಾಗಿ ಕಳುಹಿಸಲು ತಕರಾರು ಇರುವುದಿಲ್ಲ.

ವಾದಿಗೆ ಮೋಸಮಾಡುವ ಉದ್ದೇಶದಿಂದ ಮತ್ತು ಕ್ರಯಪತ್ರ ಮಾಡಿಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಅನುಮತಿ ಪತ್ರ ಪಡೆದುಕೊಂಡಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಕ್ರಯ ಪತ್ರ ಆದ ಅಂದಿನಿಂದ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೂವಮ್ಮ ರವರು ವಸಂತಮ್ಮನ ಮಗಳು ಇರುತ್ತಾರೆ. 4,50,000/- ರೂ ಹಣವನ್ನು ಕೊಟ್ಟು ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಶುಂಠಿ ಮತ್ತು ಕಾಫಿ ಬೆಳೆ ಬೆಳೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಮೋಸ ಮಾಡುವ ಉದ್ದೇಶದಿಂದ ನೀಡಿದ ವಿಚಾರಗಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು